**ಕ್ರಿಮೀನಲ್ ಮಿಸಲೇಯನ್ಸ . ನಂ.   143-2023.**

ದಿನಾಂಕಃ 11-02-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಪಾಟೀ ಸವಾಲು ಃ ಎದುರುದಾರರ ಪರವಾಗಿ ಶ್ರೀಮತಿ . ಎ.ಆರ್. ಕೆ. ವಕೀಲರಿಂದಃ**

1. 2013 ರಿಂದ ಕಾಲೇಜಿನಲ್ಲಿ ಎದುರುದಾರರ ಪರಿಚಯ ಇರುತ್ತದೆ. ಆಗ ನನಗೆ 21 ವರ್ಷ ಇರುತ್ತದೆ. _ಎದುರುದಾರರ ವಯಸ್ಸು 22 ವರ್ಷ ಆಗಿರುತ್ತದೆ. ಎದುರುದಾರರು ನನ್ನನ್ನು ಪ್ರೀತಿಸಿ ಮದುವೆಯಾಗುವಂತೆ ಕೇಳಿಕೊಳ್ಳುತ್ತಿದ್ದರು. ಹಾಗಾಗಿ ನಮ್ಮ ಮನೆಯಲ್ಲಿ ನಂತರ ಅದನ್ನು ಒಪ್ಪಿ ಮದುವೆ ಮಾಡಿಕೊಟ್ಟಿರುತ್ತಾರೆ. ನಮ್ಮ ಮದುವೆ ದಿಃ 17-07-2017 ರಂದು ಸಂಜೆ 8-00 ಗಂಟೆಗೆ ಸುಮಾರಿಗೆ ಮದುವೆಯಾಗಿರುತ್ತದೆ. ನಮ್ಮ ಮದುವೆಯ ದಿಃ 01-07-2017 ಕ್ಕೆ ಆಗಿರುತ್ತದೆ ಎಂದರೆ ಸರಿ. ನಮ್ಮ ಮದುವೆಯು ಜಮಾತನ ಸದಸ್ಯರ ಸಮಕ್ಷಮ ಆಗಿರುತ್ತದೆ. ಮದುವೆಯಲ್ಲಿ ನನ್ನ ತಂದೆ ತಾಯಿ ಭಾಗಿಯಾಗಿರುವುದಿಲ್ಲ.

2. ಮದುವೆಯ ನಿಖಾ ನಾಮಕ್ಕೆ ಶೌಕತ್ ಅಲಿ ದುಖಾಂದರ, ಅಲ್ಲಾ ಭಕ್ಷಾ ದುಖಾಂದರ, ಮತ್ತು ಇಕ್ಬಾಲ ಶೇಖರವರು ಇದ್ದರು. ನಮ್ಮ ಮದುವೆಯು ರಾತ್ರಿ 11-00 ಗಂಟೆಗೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನಮ್ಮ ಮನೆಯನ್ನು ಬಿಟ್ಟು ಓಡಿ ಬಂದಿದ್ದರಿಂದ ಜಮಾತನವರೇ ಸೇರಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಯಾವುದೇ ಸದಸ್ಯರು ಮದುವೆಗೆ ಬಂದಿರುವುದಿಲ್ಲ ಎಂದರೆ ಸರಿ.

3. ಮದುವೆಯ ಕಾಲಕ್ಕೆ ನಾನು ತಿಳಿಸಿದಂತೆ ಯಾವುದೇ ವರದಕ್ಷಿಣೆಯನ್ನು ಎದುರುದಾರರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಬಂಗಾರವನ್ನು ಖರೀದಿ ರಶೀದಿಯು ಎದುರುದಾರ ಬಳಿಯೇ

ಇರುತ್ತದೆ.    ನಿ.ಪಿ  1 ಮದುವೆಯ ಆಮಂತ್ರಣ ಪತ್ರವನ್ನು ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ  ಸಮಯ ಕೋರಿದ್ದು, ಸಮಯ ನೀಡಲಾಯಿತು.)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ